# ಅಧ್ಯಾಯ – ೬ ಸಮಾರೋಪ

## ಸಮಾರೋಪ

ಆಧುನಿಕ ಕಥನಕವನಗಳಲ್ಲಿನ ಪುರಾಣ ಸ್ವರೂಪವನ್ನು ಇಲ್ಲಿ ಅಧ್ಯಯನ ನಡೆಸಲಾಗಿದೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪೌರಾಣಿಕ ಕಥನ ಕವನಗಳು ಆಕಸ್ಮಿಕವಾಗಿ ರೂಪುಗೊಂಡಿರುವಂತದ್ದಲ್ಲ. ಪೌರಾಣಿಕ ಕಥನ ಕವನಕ್ಕೂ ಆಧುನಿಕ ಕನ್ನಡ ಚರಿತ್ರೆಗೂ ಒಂದು ನಿಕಟ ಸಂಬಂಧ ಇದೆ. ಹಾಗೆಯೇ ಆಧುನಿಕ ಕನ್ನಡ ಕಥನ ಕವನಗಳು ಅದರದ್ದೇ ಆದ ಅನನ್ಯ ಲಕ್ಷಣಗಳನ್ನು ಹೊಂದಿದೆ. ವಸಾಹತುಶಾಹಿ ಕಾಲಘಟ್ಟದಲ್ಲಿ ರೂಪುಗೊಂಡ ಶಿಕ್ಷಣದ ಕ್ರಮ, ರಾಷ್ಟ್ರೀಯತೆ ಆಂದೋಲನ, ವಿಶಿಷ್ಟ ವೈಚಾರಿಕ ಜ್ಞಾನ ಮಾದರಿಗಳು ಪುರಾಣಗಳನ್ನು ಆಧುನಿಕ ಯುಗಕ್ಕೆ ತಕ್ಕಂತೆ ಮತ್ತು ಪುನರನ್ವಯಗೊಳಿಸಲು ಪ್ರೇರೇಪಿಸಿದೆ. ಭಾರತೀಯ ಲೇಖಕರು ಒಂದು ಹಂತದಲ್ಲಿ ಪೌರಾಣಿಕ ಕಥನ ಕವನಗಳನ್ನು ರಾಷ್ಟ್ರೀಯತೆಯ ಸಂಕೇತದ ಭಾಗವಾಗಿ ಸ್ವ ಸಂಸ್ಕೃತಿಯ ಆರಾಧನೆಯ ಚಿಂತನೆಯಾಗಿ ಮಂಡಿಸಿದರು. ವಸಾಹತುಶಾಹಿಗೆ ಮುಖಾಮುಖಿಯಾಗುವಲ್ಲಿನ ವಿವರಗಳನ್ನು ಪೌರಾಣಿಕ ಕಥನ ಕವನಗಳು ತೆರೆದಿಡುತ್ತದೆ. ಹೀಗಾಗಿ ಪೌರಾಣಿಕ ಕಥನ ಕವನಗಳ ಅಧ್ಯಯನವು ತುಂಬಾ ಉಪಯುಕ್ತವಾದುದಾಗಿದೆ.

ಪ್ರಾರಂಭಿಕ ಪೌರಾಣಿಕ ಕಥನ ಕವನಗಳಿಗೆ ಪುರಾಣದ ಭಾವುಕ ಆವೇಶಪೂರಿತ ಪ್ರಪಂಚವೇ ಆಕರ್ಷಕವಾಗಿ ಕಂಡಿತು. ಪುರಾಣದ ನಿಲುವನ್ನೇ ಸಮರ್ಥಿಸಲು ಹುಟ್ಟಿಕೊಂಡ ಆಧುನಿಕ ಕಥನಕವನಗಳು ನಿಧಾನವಾಗಿ ಪುರಾಣಗಳಿಗೆ ಹೊಸ ಪ್ರತಿಕ್ರಿಯೆಯಾಗಿ ಮೂಡಿ ಬರತೊಡಗಿತು. ಹಳೆಯ ಒಳ ಮೈಯನ್ನು ಕಳಚಿಕೊಳ್ಳುತ್ತಾ ಪೌರಾಣಿಕ ವಸ್ತು, ವಿಚಾರಗಳಲ್ಲಿ ಪೌರಾಣಿಕ ಆಶಯಗಳಿಗೆ ಭಿನ್ನವಾದ ಸಾಂಸ್ಕೃತಿಕ ಜಗತ್ತಿನ ಸಂವಾದಗಳನ್ನು ವಾಗ್ವಾದಗಳನ್ನು ಅಭಿವ್ಯಕ್ತಿಸಲಾರಂಭಿಸಿತು.

ಪುರಾಣಗಳೆಂದರೆ 'ಪೂಜ್ಯಾರ್ಹ ಗ್ರಂಥಗಳು' ಎಂಬ ನಿಲುವಿನಿಂದ ತೊಡಗಿ, ಸಂದು ಹೋದ ಸಾಂಸ್ಕೃತಿಕ ಜಗತ್ತಿನ ಪ್ರಭುತ್ವದ ಸಾಕ್ಷಿಗಳಾಗಿ ಪುರಾಣಗಳನ್ನು ಕಾಣಲಾಗಿದೆ. ಆಧುನಿಕ ವೈಚಾರಿಕ ಚಿಂತಕರು ಸಾಂಸ್ಕೃತಿಕ ಜಗತ್ತಿನ ಇತಿಹಾಸಗಳೇ ಪುರಾಣಗಳೆಂದು ನಿಲುವು ತಳೆದಿದ್ದಾರೆ. ಪುರಾಣದ ಕುರಿತಂತೆ ವ್ಯಾಖ್ಯಾನಗಳನ್ನು ಪಟ್ಟಿ ಮಾಡುವ ಕೆಲಸ ಅಗತ್ಯವಿಲ್ಲವೆಂದು ತಿಳಿಯಲಾಗಿದ್ದರೂ ಪುರಾಣ ಕುರಿತಂತೆ ಡಿ.ಡಿ. ಕೋಸಾಂಬಿ, ರೋಮಿಲಾ ಥಾಪರ್, ರಾಜೇಂದ್ರ ಚೆನ್ನಿ, ಕೆ. ಎಲ್. ಗೋಪಾಲಕೃಷ್ಣಯ್ಯ, ಮಲ್ಲೇಪುರಂ. ಜಿ. ವೆಂಕಟೇಶ ಮೊದಲಾದ ಚಿಂತಕರ ಅಭಿಪ್ರಾಯವನ್ನು ಚರ್ಚೆಗಾಗಿ ಅಲ್ಲಲ್ಲಿ ಬಳಸಿಕೊಳ್ಳಲಾಗಿದೆ. ಪುರಾಣ–

ಆಧುನಿಕ ಸಾಹಿತ್ಯ ಲೋಕದಲ್ಲಿ ಪ್ರವೇಶ ಪಡೆದ ಬಗೆ, ಅದಕ್ಕೆ ತೋರಿ ಬಂದ ಪ್ರತಿಕ್ರಿಯೆಗಳು ಅವು ಕಥನ ಕವನ ರೂಪ ಪಡೆದುದನ್ನು ಗಮನಿಸಲಾಗಿದೆ. ಈ ನೆಲೆಯಲ್ಲಿ ಪುರಾಣವು ಮತ್ತೆ ಮತ್ತೆ ಆಧುನಿಕ ಸಾಹಿತಿಗಳ ತೆಕ್ಕೆಗೆ ಒಗ್ಗಿಕೊಂಡು 'ಪುರಾ-ನವ' ಪುರಾತನವಾದರೂ ಸದಾ ನೂತನವಾದದ್ದು ಎಂಬ ಅರ್ಥಕ್ಕೆ ಬದ್ಧವಾಗಿದೆ.

ವಸಾಹತುಶಾಹಿ ಉಂಟುಮಾಡಿದ ತಳಮಳಗಳ ನಡುವೆ ಅದನ್ನು ಸ್ವಾಗತ-ಸಂಘರ್ಷವಾಗಿ ಪ್ರತಿಕ್ರಿಯಿಸಬೇಕಾದದ್ದು ಅನಿವಾರ್ಯವಾಗಿತ್ತು. ಇಂತಹ ಸಂದರ್ಭದಲ್ಲಿ ವಸಾಹತು ಸಂಸ್ಕೃತಿಗೆ ಪ್ರತಿಕ್ರಿಯೆಯಾಗಿ ಈ ನೆಲದ ಯಜಮಾನ ಸಂಸ್ಕೃತಿಯ ಪ್ರತೀಕದಂತಿದ್ದ ಪುರಾಣಗಳನ್ನು, ಪುರಾಣ ಮೌಲ್ಯಗಳನ್ನು ನಚ್ಚಿಕೊಳ್ಳಬೇಕಾಗಿದ್ದ ಅನಿವಾರ್ಯತೆಗಳನ್ನು ಕಥನ ಕವನಗಳ ಮೂಲಕ ಕಾಣಲಾಗಿದೆ.

ಈ ಸಂದರ್ಭದಲ್ಲಿನ ಕಥನ ಕವನಗಳು ಸ್ಪಷ್ಟಮಾಡುವ ಪ್ರಮುಖ ವಿಚಾರವೆಂದರೆ ವಸಾಹತುಶಾಹಿ ತಂದೊಡ್ಡಿದ ಪರಕೀಯ ಸಂಸ್ಕೃತಿ ಮತ್ತು ದೇಶೀಯ ಸಂಸ್ಕೃತಿಯ ಮುಖಾಮುಖಿಯಲ್ಲಿ ತನ್ನೊಳಗೆ ಹೊಸತೊಂದು ಸುಧಾರಣಾವಾದಿ ಚಲನೆಯ ನಿಲುವುಗಳನ್ನು. ಇಡೀ ದೇಶ 'ಏಕದೇಹಿ'ಯಾಗಿ ವಸಾಹತುಶಾಹಿಗೆ ಪ್ರತಿಕ್ರಿಯಿಸಬೇಕಾದಾಗ ಅನಿವಾರ್ಯವಾಗಿ ಪುರಾಣ ಮೌಲ್ಯಗಳ ಕಡೆ ಮುಖ ಮಾಡಿತು. ಹಾಗೆ ಮಾಡುವಾಗಲೂ ಅಲ್ಲಿನ ಮೌಲ್ಯಗಳನ್ನು ಪುನರ್ ಸಂಸ್ಕರಿಸಿ ಸ್ಥಾಪಿಸುವ ಮನೋಭಾವ ಕಂಡು ಬರುತ್ತದೆ. ಈ ಹೆಜ್ಜೆ, ಬೆಳವಣಿಗೆ ಹಂತಗಳನ್ನು ಪೌರಾಣಿಕ ಕಥನ ಕವನಗಳಲ್ಲಿ ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಈ ಪರಿಣಾಮವಾಗಿ ಕಥನ ಕವನಗಳಲ್ಲಿ ಪುರಾಣಗಳನ್ನು ಶಿಷ್ಟ ಮತ್ತು ದುಷ್ಟಶಕ್ತಿಗಳ ನಡುವಣ ಸಂಘರ್ಷ (ಭಾರತೀಯ ಸಂಸ್ಕೃತಿ >< ವಸಾಹತುಶಾಹಿ ಸಂಸ್ಕೃತಿ) ವೆಂದು ತಿಳಿದು ಸ್ವೀಕರಿಸಲಾಗಿದೆ. ಅಲ್ಲಿನ ಮೌಲ್ಯಗಳನ್ನು ಒಪ್ಪಿತವೆಂದು ಸ್ವೀಕರಿಸಲಾಗಿದೆ. ನೊಂದ ಪಾತ್ರಗಳ ಬಗ್ಗೆ ಸಹಾನುಭೂತಿ ಹಾಗೂ ಅಂತಿಮವಾಗಿ ದೊರೆಯುವ ಸದ್ಗತಿ ಕುರಿತಂತೆ ತೃಪ್ತಿ ಕಂಡು ಬರುತ್ತದೆ. (ಕಡೆಂಗೋಡ್ಲು, ಪು.ತಿ.ನ, ಮಾಸ್ತಿ, ಬೇಂದ್ರೆ) ಅಂತಿಮವಾಗಿ ಅಲ್ಲಿನ ಮೌಲ್ಯಗಳನ್ನು ಉಳಿಸಿಕೊಳ್ಳುವ ಹಂಬಲ ಇಲ್ಲಿನ ಕಥನ ಕವನಗಳದ್ದು. ಇದೇ ಶ್ರದ್ಧೆಯಿಂದ ಕುವೆಂಪು, ಗೋವಿಂದ ಪೈಯವರು ಪುರಾಣಗಳನ್ನು ಸ್ವೀಕರಿಸಿದರೂ ವರ್ತಮಾನದ ಬದುಕಿಗೆ, ಅಗತ್ಯಕ್ಕೆ ತಕ್ಕಂತೆ ಅಲ್ಲಿನ ಮೌಲ್ಯಗಳಿಗೆ ಹೊಸ ಮೌಲ್ಯಗಳನ್ನು ಸಂಸ್ಕಾರಗೊಳಿಸಿ, ಹೊಸ ವರ್ತಮಾನದ ಜೀವನ ದರ್ಶನಗಳನ್ನು ತುಂಬಿ ಕೊಡುತ್ತಾರೆ. ಪುರಾಣದ ಸರಳರೇಖೆಯ ನೇರ ನಡೆಯ ಹೆಜ್ಜೆ ಗುರುತುಗಳಲ್ಲಿ ಬದಲಾವಣೆಗಳು ಕಂಡು ಬರುತ್ತವೆ. ಸು.ರಂ ಎಕ್ಕುಂಡಿ, ಜಿ. ಎಸ್. ಶಿವರುದ್ರಪ್ಪನವರ ಸಾಲಿನ ಅನೇಕ ಕವಿಗಳು ಕಥನ ಕವನಗಳಲ್ಲೆ ಪುರಾಣಗಳನ್ನು ಸ್ವೀಕರಿಸಿ, ಅಲ್ಲಿ ಸಾಗಿ ಬಂದ ಪುರಾಣ ಮೌಲ್ಯಗಳನ್ನು ಸ್ವೀಕರಿಸಿ ಗಟ್ಟಿಗೊಳಿಸುವುದರ ಜೊತೆ ಅಲ್ಲಿನ ಮೌಲ್ಯ ಸಂಘರ್ಷವನ್ನು ಗುರುತಿಸುವ

ಪ್ರಯತ್ನ ಮಾಡುತ್ತಾರೆ. ಆದರೆ ಸಂಘರ್ಷಗಳನ್ನು ತೆಳುಗೊಳಿಸಿ ಧಾರ್ಮಿಕ ಜೀವನ ಮೌಲ್ಯಗಳನ್ನು ಸ್ವೀಕರಿಸಿ ಒಂದು ಬಗೆಯ ಸಮತೋಲನಕ್ಕಾಗಿ ತುಡಿಯುವ ಸಮನ್ವಯದ ದಾರಿಯನ್ನು ಕಂಡು ಕೊಳ್ಳುತ್ತಾರೆ.

ನವ್ಯ ಕಾಲದಲ್ಲಿನ ಕಥನ ಕವನಗಳು ಪುರಾಣ ಜಗತ್ತಿನ ಪಾವಿತ್ರ್ಯ ಮತ್ತು ನಾಯಕನನ್ನು ಕೇಂದ್ರವಾಗಿರಿಸಿಕೊಂಡು ವ್ಯವಸ್ಥೆಯ ಆದರ್ಶವನ್ನು ನಿರಾಕರಿಸಿದವು. ಪುರಾಣ ಪಾತ್ರ, ಕಥೆಗಳನ್ನು ವ್ಯಕ್ತಿಗತ ನೆಲೆಯಲ್ಲಿ ಸ್ವೀಕರಿಸಿ ಇಂಗ್ಲೀಷ್ ಸಾಹಿತ್ಯ ಎರವಲು ತಂದು ಕೊಟ್ಟ ನವ್ಯವಾದದ ಹಿನ್ನೆಲೆಯಲ್ಲಿ ವ್ಯಕ್ತಿ ಮತ್ತು ಸಮಾಜದ ನಡುವಿನ ಸಂಘರ್ಷ ರೂಪದಲ್ಲಿ ಪುರಾಣಗಳನ್ನು ಸ್ವೀಕರಿಸಿದರು. ವಸಾಹತುಶಾಹಿ ಉಂಟು ಮಾಡಿದ ಇಬ್ಬಂದಿತನವನ್ನು ಇಲ್ಲಿನ ಅನೇಕ ಪೌರಾಣಿಕ ಕಥನ ಕವನಗಳು ಚಿತ್ರಿಸುತ್ತವೆ. ಅಡಿಗ, ಕಂಬಾರ, ರಾಮಚಂದ್ರ ಶರ್ಮ, ಅನಂತಮೂರ್ತಿಯವರ ಕಥನ ಕವನಗಳು ಪುರಾಣವನ್ನು ಸ್ವೀಕರಿಸುವ ನೆಲೆಗಳಿವು. ವಸಾಹತುಶಾಹಿ ಉಂಟು ಮಾಡಿದ ಇಲ್ಲಿನ ಮನೋಸ್ಥಿತಿಯನ್ನು ಇವರ ಕಥನ ಕವನಗಳು 'ಕುರುಡು ದೃತರಾಷ್ಟ್ರ ಪ್ರೀತಿ, ತ್ರಿಶಂಕು ಸ್ಥಿತಿ, ಕುಂತಿ ಮಗ ಕರ್ಣ, ದುಷ್ಯಂತನ ಶಕುಂತಲೆ, ವನವಾಸದ ಪಾಂಡವರು' ಸ್ಥಿತಿಯೊಳಗಿಟ್ಟು ನಿರೂಪಿಸುತ್ತದೆ. ಪರಂಪರೆಯ ಪುರಾಣ ಪ್ರಜ್ಞೆ ಮತ್ತು ವರ್ತಮಾನದ ಹೊಸ ಅಲೆ ತೋರಿಸಿಕೊಟ್ಟ ಮೌಲ್ಯಗಳ ನಡುವೆ ಹುಟ್ಟಿದ ಸಂದಿಗ್ಧ ಸ್ಥಿತಿಯ ಸಾಕ್ಷಿಗಳಾಗಿ ಈ ಕವಿತೆಗಳು ತೆರೆದುಕೊಂಡಿವೆ. ವ್ಯಕ್ತಿಗತವಾದ ಅನೇಕ ದೌರ್ಬಲ್ಯ ಅಸಹಾಯಕತೆಗಳನ್ನು ಇಲ್ಲಿನ ಕಥನ ಕವನಗಳು ಪುರಾಣ ಮುಖೇನ ಸಮರ್ಥವಾಗಿ ಅಭಿವ್ಯಕ್ತಿಸುತ್ತದೆ. ಅಡಿಗರ ಭೂಮಿಗೀತ, ಕೂಪ ಮಂಡೂಕ. ಗಜೇಂದ್ರ ಮೋಕ್ಷ, ಶರ್ಮರ ಪಾಂಡುಮಾದ್ರಿ, ಗಾರುಡಿ, ಅಯೋಧ್ಯೆ, ನಿಮ್ಮಂತೆಯೇ; ಮೊದಲಾದವು ಈ ನಿಟ್ಟಿನ ಕಥನ ಕವನಗಳು.

ಪುರಾಣಗಳಲ್ಲಿ ಸಾಮಾನ್ಯವೆನಿಸಿದ ಮತ್ತು ತಿರಸ್ಕಾರಕ್ಕೆ ಒಳಗಾದ ಪಾತ್ರಗಳನ್ನು ಸ್ವೀಕರಿಸಿ, ಜನಾಂಗಿಯ ಸಂಘರ್ಷದ ನೆಲೆಯಲ್ಲಿ ಕಾಣುವ ಪ್ರಯತ್ನ ದಲಿತ ಬಂಡಾಯದ ಪುರಾಣ ಕಥನ ಕವಿತೆಗಳದ್ದು. ಜಾತಿ – ವರ್ಗದ ಸಂಘರ್ಷದ ಪಾತ್ರಗಳಾಗಿ, ರಾಕ್ಷಸ–ದೇವತೆಗಳನ್ನು ಉಳ್ಳವರ ಮತ್ತು ಇಲ್ಲದವರ ಚಿತ್ರಗಳಾಗಿ ಸ್ವೀಕರಿಸುವುದನ್ನಿಲ್ಲಿ ಕಾಣಲಾಗಿದೆ. ಅನೇಕ ಕವಿತೆಗಳಲ್ಲಿ ಬಲಿ, ರಾವಣ, ವಾಲಿ, ಶಂಭೂಕ, ಕವಷ ಋಷಿ ಮೊದಲಾದವರನ್ನು ಪ್ರಧಾನ ನಾಯಕರ ನೆಲೆಯಲ್ಲಿ ಸ್ವೀಕರಿಸಿ, ಈ ತನಕದ ನಾಯಕರ ಕೆಲಸಗಳನ್ನು ಚಿಕಿತ್ಸಕ ದೃಷ್ಟಿಯಿಂದ ಕಾಣುವ ದೃಷ್ಟಿ ಧೋರಣೆಗಳು ಇಲ್ಲಿ ಪ್ರಮುಖವಾಗಿದೆ. ವಾಮನ ಬಲಿಯಿಂದ ಭೂಮಿ ವಶಪಡಿಸಿಕೊಳ್ಳುವ, ವಾಲಿಯನ್ನು ಮರೆಯಲ್ಲಿ ನಿಂತು ಕೊಲ್ಲುವ ರಾಮನ ಚಿತ್ರಗಳು ದಲಿತ ಬಂಡಾಯದ ಸಮಕಾಲೀನ ತಾತ್ವಿಕತೆಯನ್ನು ಸಮರ್ಥಿಸುತ್ತದೆ. ಪುರಾಣದ ಪಾತ್ರಗಳನ್ನು ಸಮಕಾಲೀನ ಚಿಂತನೆಯ ಓರೆಗೆ

ಹಚ್ಚುವ ಕಥನ ಕವನಗಳಿಲ್ಲಿವೆ. ಇದಕ್ಕೆ ಸಮನಾಂತರದಲ್ಲಿ ಪುರಾಣದಲ್ಲಿ ಈ ತನಕ ನಾಯಕ ಹಾಗೂ ಪವಿತ್ರ ಮೌಲ್ಯಗಳೆಂದು ಕಂಡು ಬಂದವುಗಳನ್ನು ಭಂಜನಗೊಳಿಸಿ ವ್ಯವಸ್ಥೆಯ ಒಳಗಿನ ತಂತ್ರಗಾರಿಕೆಯನ್ನು ತೆರೆದು ತೋರುವ ಉದ್ದೇಶ ಕಂಡು ಬರುತ್ತದೆ.

ಜತೆಗೆ ಪರಂಪರೆಯ ಪುರಾಣಗಳಿಗೆ ಸಮಾನವಾಗಿ ಸಮೂಹದ ಪುರಾಣಗಳನ್ನು ಮತ್ತೆ ಕಟ್ಟುವ, ಮುಖಾಮುಖಿಯಾಗಿಸುವ ಪ್ರಯತ್ನಗಳಿಲ್ಲಿದೆ. ವಸಾಹತುಶಾಹಿ ಕಾಲಕ್ಕೆ ಯಜಮಾನ ಸಂಸ್ಕೃತಿಯ ಮೌಲ್ಯಗಳನ್ನು ಪೌರಾಣಿಕ ಕಥನಕವನಗಳ ಮೂಲಕ ಮುಖಾಮುಖಿ ಮಾಡಿದಂತೆ. ಇಲ್ಲಿ ಯಜಮಾನ ಸಂಸ್ಕೃತಿಯ ಪ್ರತೀಕಗಳಾಗಿದ್ದ ಪರಂಪರೆಯ ಪುರಾಣಗಳ ಮೌಲ್ಯಗಳಿಗೆ- ಸಮುದಾಯ ಬದುಕಿನ ಪುರಾಣ ಮೌಲ್ಯಗಳನ್ನು ಮುಖಾಮುಖಿ ಮಾಡುವುದನ್ನಿಲ್ಲಿ ಕಾಣಬಹುದಾಗಿದೆ. ಸಮೂಹ ಪುರಾಣಗಳಲ್ಲಿನ ಪಾತ್ರ ಮೌಲ್ಯಗಳನ್ನು ಪರಂಪರೆಯ ಪುರಾಣ ಪಾತ್ರ ಮೌಲ್ಯಗಳಿಗೆ ಸಮಾನಂತರವಾಗಿ ಕಟ್ಟುವ, ಜತೆಗೆ ಪುರಾಣ ಪಾತ್ರಗಳಲ್ಲಿ ಪ್ರತಿಲೋಮವನ್ನು ಕಾಣುವ, ಅವುಗಳ ಊರ್ಧ್ವಮುಖಿ ತುಡಿತದ ಅಗತ್ಯಗಳನ್ನು ನಿರಾಕರಿಸುವ ಚಿಂತನೆಗಳು (ಸ್ವರ್ಗದ ಹಂಬಲವನ್ನು ನಿರಾಕರಿಸಿ, ನೆಲದ ಹಂಬಲವನ್ನು ಮುಖ್ಯವಾಗಿಸುವ) ಕಥನ ಕವನಗಳಿಗೆ ಮುಖ್ಯವಾಗಿದೆ. ಪುರಾಣ ಪಾತ್ರಗಳ ಮೂಲಕ ಸಾಮಾಜಿಕ ಬದುಕಿನ ಹಕ್ಕುಗಳನ್ನು ನಿರಾಕರಿಸಿದ ವ್ಯವಸ್ಥೆಯ ಗುಣಗಳನ್ನು ಬಯಲಿಗೆಳೆದು ಗತದ ಮೂಲಕ ವರ್ತಮಾನ ವ್ಯವಸ್ಥೆಯ ಮೂಲ ಕಾರಣಗಳನ್ನು ಗುರುತಿಸುವ ಕೆಲಸವನ್ನು ಮಾಡುತ್ತವೆ. ಪುರಾಣ ಭಂಜನದ ಜೊತೆಗೆ ವರ್ತಮಾನದ ಬದುಕಿಗೆ ಉತ್ತರವನ್ನು ಕಂಡುಕೊಳ್ಳುವ ಪ್ರಯತ್ನವಿಲ್ಲಿದೆ. ಬರಗೂರರ ಮಾದಿಗರ ಹುಡುಗಿ, ಸಿದ್ಧಲಿಂಗಯ್ಯನವರ ಕತ್ತೆ ಮತ್ತು ಧರ್ಮ, ಅಮರಚಿಂತ ಜಂಭಣ್ಣರ ಧ್ರುವ ನಕ್ಷತ್ರ, ಎಚ್, ಎಸ್. ಶಿವಪ್ರಕಾಶರ ಸಮಗಾರ ಭೀಮವ್ವ; ಹೋಗು ದಕ್ಷನ ಮಗಳೇ; ವಾಲೀಕಾರರ ಅಹಲ್ಯ, ಕರ್ಣ, ಮುಳ್ಳೂರರ ನೆಲದ ಜೋಗುಳ; ಮ. ನ. ಜವರಯ್ಯನವರ ತಲಾಂತರ; ವಿಜಯ ದಬ್ಬೆಯವರ ಶಂಭೂಕ; ಬಂಜಗೆರೆ ಜಯಪ್ರಕಾಶರ ಮಹೂವಾ ಮುಖ್ಯವಾಗುತ್ತದೆ. ಅಲ್ಲದೆ ಅರವಿಂದ ಮಾಲಗತ್ತಿಯವರ ಶ್ರೀಚಂಡಾಲ ಸ್ವರ್ಗಾರೋಹಣಂ; ಶರ್ಮರ ಅಶ್ವಮೇಧ; ಕವಿತೆಗಳು ಹಳೆ ಪರಂಪರೆಯ ಪುರಾಣವನ್ನು ಕಟ್ಟಿಕೊಡುವಂತೆ ಹೊರಟು ಪುರಾಣವನ್ನು ಭಂಜನಗೊಳಿಸುವುದಷ್ಟೇ ಅಲ್ಲದೆ ವರ್ತಮಾನದ ಪ್ರಮುಖ ಸಮಸ್ಯೆಗಳನ್ನು ಅಂತರ್ಗತಗೊಳಿಸುತ್ತಾ ಅಂತರ್ಯದಿಂದಲೇ ಆಗಬೇಕಾದ ಪುರಾಣ ಭಂಜನವನ್ನು ತೋರುತ್ತದೆ. ಪರಂಪರೆಯ ಪುರಾಣ ಮೌಲ್ಯಗಳ ಜೊಳ್ಳನ್ನು ಒಡೆದು ಈ ತನಕದ ಆದರ್ಶ ಮೌಲ್ಯಗಳ ಪಾವಿತ್ರ್ಯತೆಯ ಕಲ್ಪನೆಯನ್ನು ನಾಶಮಾಡುತ್ತದೆ. ಪ್ರಭುತ್ವ ವರ್ಗವು ಶೋಷಿತ, ಶ್ರಮಿಕ ವರ್ಗದ ಬದುಕಿಗೆ ನಿರಂತರವಾಗಿ

ಮಾಡುತ್ತಲೇ ಬಂದ ಚಾರಿತ್ರಿಕ ವಂಚನೆಯನ್ನು ಈ ಕಥನ ಕವನಗಳು ಬಯಲಿಗೆಳೆಯುತ್ತದೆ.

ಒಟ್ಟಾಗಿ ಹೇಳುವುದಾದರೆ ಪೌರಾಣಿಕ ಕಥನ ಕವನಗಳಿಗೆ ಇರುವ ಸಾಧ್ಯತೆಗಳನ್ನು ಈ ಎಲ್ಲಾ ಹಂತದ ಕವಿಗಳು ತೋರಿಸಿಕೊಟ್ಟಿದ್ದಾರೆ. ಕೆಲವು ಕಾಲದ ಕವಿಗಳು ಪುರಾಣ ಕಥೆಗಳ ಆಶಯವನ್ನು ಹಾಗೆಯೇ ಇಟ್ಟು ನಿರೂಪಣೆಯಲ್ಲಿ ಹೊಸತನವನ್ನು ಕಾಪಾಡಿಕೊಂಡರೆ, ಮತ್ತೆ ಕೆಲವು ಸಂದರ್ಭಗಳಲ್ಲಿ ಪುರಾಣ ಭಂಜನ ಪ್ರಕ್ರಿಯೆ ನಡೆದಿದೆ. ಅಷ್ಟೇ ಅಲ್ಲದೆ ಅವುಗಳ ಮುಖೇನ ತಾತ್ವಿಕ ಪ್ರತಿಪಾದನೆಯನ್ನು ಕವಿಗಳು ಮಾಡಿದ್ದಾರೆ.

ಪೌರಾಣಿಕ ಕಥನ ಕವನಗಳು ಒಂದೇ ರೀತಿಯ ಅಚ್ಚಿನಲ್ಲಿ ಎರಕ ಹೊಯ್ದ ಮಾದರಿಗಳಲ್ಲ. ಪೌರಾಣಿಕ ಕಥನ ಕವನಗಳನ್ನು ಬರೆಯುವಾಗ ನವೋದಯ ಕಾಲದ ಕವಿಗಳಿಗೆ ಪ್ರಮುಖವಾಗುವ ಕೆಲವಂಶಗಳು ಈ ಕೆಳಗಿನಂತಿವೆ..

೧. ಪೌರಾಣಿಕ ಕಥನ ಕವನಗಳ ಮೂಲಕ ವಸಾಹತುಶಾಹಿ ಅನುಭವಕ್ಕೆ ಪ್ರತಿಕ್ರಿಯೆಯನ್ನು ನೀಡಿದರು.

೨. ನವೋದಯ ಕಾಲದ ಕವಿಗಳು ಉದಾರವಾದಿ ಮಾನವತಾವಾದದ ಹಿನ್ನೆಲೆಯಲ್ಲಿ ಪೌರಾಣಿಕ ಆಶಯಕ್ಕೆ ಪ್ರತಿಕ್ರಿಯಿಸಿದರು.

೩. ಪೌರಾಣಿಕ ಕಥನ ಕವನಗಳು ನವೋದಯ ಕಾಲದ ಕವಿಗಳಿಗೆ ಸ್ವ-ಸಂಸ್ಕೃತಿ ಆರಾಧನೆಯ ಅಂಶವೂ ಆಗಿತ್ತು.

೪. ನವೋದಯ ಕಾಲದಲ್ಲಿ ಆಯ್ಕೆ ಮಾಡಿಕೊಂಡ ಪೌರಾಣಿಕ ಕಥನ ಕವನಗಳಲ್ಲಿ ಭಾರತೀಯ ಪ್ರಧಾನ ಸಂಸ್ಕೃತಿಯ ಪ್ರತಿಪಾದಿಸಿದ ಸಂಗತಿಗಳು ಮುಖ್ಯವಾದುವು.

೫. ರಾಷ್ಟ್ರೀಯತೆ, ಸ್ವದೇಶಿ ಚಿಂತನೆ, ಯುರೋಪು ಕೇಂದ್ರಿತ ಜ್ಞಾನ ಮಾದರಿಗಳಿಗಿಂತ ಭಿನ್ನ ನಿಲುವು ಪುರಾಣವನ್ನು ಆಧುನಿಕ ಯುಗಕ್ಕೆ ತಕ್ಕಂತೆ ನಿರ್ವಚಿಸುವುದು ಅವರಿಗೆ ಮುಖ್ಯವಾಯಿತು.

ಸಮನ್ವಯದ ಸಂದರ್ಭದಲ್ಲಿ ಕವಿಗಳು ಪುರಾಣವನ್ನು ಸಮನ್ವಯದ ಹಿನ್ನೆಲೆಯಿಂದಲೇ ಪರಿಭಾವಿಸಿದರು. ಪೌರಾಣಿಕ ಆಶಯವನ್ನು ಸಂಪೂರ್ಣವಾಗಿ ತ್ಯಜಿಸದೆ ಹೊಸಕಾಲಕ್ಕೆ ತಕ್ಕಂತೆ ನಿರ್ವಚಿಸಿದರು.

ಆದರೆ ನವ್ಯ ಸಂದರ್ಭದಲ್ಲಿ ಪೌರಾಣಿಕ ಕಥೆಗಳು ಕೆಲವು ಪರಿವರ್ತನೆಗಳಿಗೆ ಗುರಿಯಾಯಿತು.

೧. ವ್ಯಕ್ತಿವಾದದ ಹಿನ್ನೆಲೆಯಿಂದ ಪುರಾಣಗಳನ್ನು ನಿರ್ವಚಿಸಲಾಗಿದೆ.

೨. ಪೌರಾಣಿಕ ಜಗತ್ತು ಆಧುನಿಕ ಚಿಂತನೆಗಳ ಹಿನ್ನಲೆಯಿಂದ ರೂಪುಗೊಂಡಿದೆ.

೩. ಪುರಾಣವು ಸಾಂಕೇತಿಕ ಮತ್ತು ಪ್ರತಿಮಾತ್ಮಕ ಅರ್ಥವ್ಯಾಪ್ತಿಯನ್ನು ಪಡೆದುಕೊಂಡಿದೆ.

೪. ನವ್ಯದ ಪ್ರಮುಖ ತಾತ್ವಿಕತೆಗಳ ಹಿನ್ನೆಲೆಯಿಂದಲೂ ಪುರಾಣವನ್ನು ನಿರ್ವಚಿಸಲಾಯಿತು.

ಉದಾಹರಣೆಗೆ : ಶ್ರೀ ರಾಮನವಮಿಯ ದಿವಸ (ಅಡಿಗ), ಪಾಂಡು – ಮಾದ್ರಿ (ಶರ್ಮ) ಈ ತರದ ಕವಿತೆಗಳಲ್ಲಿ ಅಸ್ತಿತ್ವವಾದ, ಪರಂಪರೆಯ ಶೋಧ, ಫ್ರಾಯ್ಡ್‌ವಾದದ ಪ್ರಭಾವ ಮುಂತಾದವುಗಳನ್ನು ಕಾಣಬಹುದು. ೧೯೬೦ರ ದಶಕದ ಕೊನೆಭಾಗದಿಂದ ಪುರಾಣವನ್ನು ನೋಡುವ ಕ್ರಮಗಳೇ ಬೇರೆಯಾದವು. ಪೌರಾಣಿಕ ಕಥೆಗಳಿಗೆ ಹೊಸ ರೀತಿಯ ಅರ್ಥವನ್ನು, ಪ್ರಗತಿಪರ ದೃಷ್ಟಿಕೋನವನ್ನು ಈ ಸಂದರ್ಭದಲ್ಲಿ ಅನ್ವಯಿಸಲಾಯಿತು. ಅವೈದಿಕ ಎನ್ನಬಹುದಾದ ಪುರಾಣಗಳ ಅನುಭವ ಈ ಸಂದರ್ಭದಲ್ಲಿ ಹೆಚ್ಚು ಪ್ರಚಲಿತವಾಯಿತು.

ಸಾಮಾಜಿಕ ಮತ್ತು ಚಾರಿತ್ರಿಕ ಬದಲಾವಣೆಗಳ ಸಂದರ್ಭದಲ್ಲಿ ಲೇಖಕರು ಪುರಾಣಗಳಿಗೆ ಪ್ರತಿಕ್ರಿಯಿಸಿರುವ ವಿಧಾನವು ಬೇರೆ ಬೇರೆ ಸಂಗತಿಗಳಿಂದ ಕೂಡಿಕೊಂಡಿವೆ. ಅವುಗಳನ್ನು ಇಲ್ಲಿ ಅಧ್ಯಯನ ನಡೆಸಲಾಗಿದೆ.

ಪೌರಾಣಿಕ ಕಥನ ಕವನಗಳ ರಾಚನಿಕ ವಿನ್ಯಾಸ ಕ್ರಮವನ್ನು ಸ್ಥೂಲವಾಗಿ ಪರಿಶೀಲಿಸಲಾಗಿದ್ದು ರಚನೆಯು ಭಿನ್ನ ಭಿನ್ನ ನೆಲೆಯಲ್ಲಿ ಒಟ್ಟು ಅರ್ಥಕ್ಕಾಗಿ ದುಡಿಯುವ ಸಾಧ್ಯತೆಯನ್ನು ನಿರೂಪಿಸಲಾಗಿದೆ. ಪರಂಪರೆಯ ಪುರಾಣದ ರಾಚನಿಕ ವಿನ್ಯಾಸ ಮಾದರಿಯನ್ನು ಮತ್ತು ಆಧುನಿಕ ಪೌರಾಣಿಕ ಕಥನ ಕವನದ ರಾಚನಿಕ ವಿನ್ಯಾಸ ಕ್ರಮವನ್ನು ವಿವರಿಸಲಾಗಿದೆ.

* * * * * *